**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಕಡೂರು**

**ಸಿಸಿ. ನಂ.1534/2019**

ಫಿರ್ಯಾದಿ : ಕಡೂರು ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು :

1. ನಾಗೇಶ್ ಎಸ್ ಬಿನ್ ಸತ್ಯನಾರಾಯಣ,
ವಯಸ್ಸು ಸುಮಾರು 30 ವರ್ಷ, ಚಾಲಕ,
ವಾಸಃ ಗೆದ್ಲೆಹಳ್ಳಿ, ಭೋವಿ ಕಾಲೋನಿ,
ಕಡೂರು ತಾಲ್ಲೂಕು.
2. ದಯಾನಂದ ವೈ.ಟಿ. ಬಿನ್ ತಮ್ಮಯ್ಯ,
ವಯಸ್ಸು ಸುಮಾರು 41 ವರ್ಷ,
ಚಿಲ್ಲರೆ ಅಂಗಡಿ ವ್ಯಾಪಾರ,
ವಾಸಃ ಯಗಟಿ ಗ್ರಾಮ, ಕಡೂರು ತಾಲ್ಲೂಕು.
3. ರಂಗಸ್ವಾಮಿ ವಿ ಬಿನ್ ವೆಂಕಟಪ್ಪ,
ವಯಸ್ಸು ಸುಮಾರು 55 ವರ್ಷ, ಕೂಲಿ,
ವಾಸಃ ಗೆದ್ಲೆಹಳ್ಳಿ, ಭೋವಿ ಕಾಲೋನಿ,
ಕಡೂರು ತಾಲ್ಲೂಕು.

**ದೋಷಾರೋಪಣೆ**

ಶ್ರೀ. ಹೆಚ್.ಪಿ ಮೋಹನ್‌ಕುಮಾರ್ ಬಿ.ಎಸ್ಸಿ, ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆರೋಪಿಗಳಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ಮೊದಲನೇಯದಾಗಿ, ದಿನಾಂಕ 14.11.2018 ರಂದು ಸಂಜೆ ಸುಮಾರು ಸಂಜೆ 5.30 ಗಂಟೆ ಸಮಯದಲ್ಲಿ ಚಾಸಾ.1 ಮತ್ತು ಚಾಸಾ.4 ರವರುಗಳು ಗೆದ್ಲೆಹಳ್ಳಿ ಭೋವಿ ಕಾಲೋನಿಯ ಚಂದ್ರಪ್ಪರವರ ಮನೆಯ ಬಳಿ ಹೋಗುತ್ತಿದ್ದ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಸಮವಸ್ತ್ರದಲ್ಲಿದ್ದ ಚಾಸಾ.1 ರವರನ್ನು ಹಾಗೂ ಮಫ್ತಿಯಲ್ಲಿದ್ದ ಚಾಸಾ.4 ರವರನ್ನು ಅಡ್ಡಗಟ್ಟಿ ಮುಂದೆ ಹೋಗದಂತೆ ತಡೆದಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ಮತ್ತು ಚಾಸಾ.4 ರವರನ್ನು ಅಡ್ಡಹಾಕಿ, ಬೋಳಿ ಮಕ್ಕಳಾ ಈ ದಿನ ನಮ್ಮ ಊರಿನಲ್ಲಿ ಮಂಜಪ್ಪನ ಮಗಳಾದ ಮೇಘಾಳ ಬೀಗರ ಊಟ ಇದೆ ಎಣ್ಣೆ ಕುಡಿಬೇಕು, ಮಾರಲಿ ಬಿಡ್ರೋ, ಎಣ್ಣೆ ಮಾರಿದರೆ ನಿಮಗೆ ಏನಾಗುತ್ತೆ ಎಣ್ಣೆ ಮಾರ್ತಿವಿ, ನಿವೇನು ಕಿತ್ತುಕೊಳ್ಳುತ್ತೀರಿ ಎಂದು ಅವಾಚ್ಯ ಶಬ್ದಗಳಿಂದ ಬೈದಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವುಗಳು ಅಪರಾಧಿಕ ಬಲ ಪ್ರಯೋಗಿಸಿ, ಸಮಾನ ಉದ್ದೇಶದಿಂದ ಚಾಸಾ.1 ಮತ್ತು ಚಾಸಾ.4 ರವರ ಸರ್ಕಾರಿ ಕರ್ತವ್ಯವನ್ನು ತಡೆದಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 353 ಸಹವಾಚಕ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಕರ್ತವ್ಯದಲ್ಲಿದ್ದ ಚಾಸಾ.1 ಮತ್ತು ಚಾಸಾ.4 ರವರ ಕಾಲರನ್ನು ಹಿಡಿದು ಎಳೆದಾಡಿ, ಕೈಗಳಿಂದ ದೂಡಿದ್ದು, ನಂತರ 1 ನೇ ಆರೋಪಿಯಾದ ನೀವು ಚಾಸಾ.1 ರವರ ಮುಖಕ್ಕೆ, ಎದೆಗೆ ಜೋರಾಗಿ ಹೊಡೆದಿದ್ದು, 2 ಮತ್ತು 3 ನೇ ಆರೋಪಿತರಾದ ನೀವು ಚಾಸಾ.1 ರವರನ್ನು ಹಿಡಿದುಕೊಂಡಿದ್ದು, ಆಗ 1 ನೇ ಆರೋಪಿತರಾದ ನೀವು ಚಾಸಾ.1 ರವರ ತಲೆಗೆ ಡಿಕ್ಕಿ ಹೊಡೆದು, ಹಲ್ಲೆ ಮಾಡಿ ಸ್ವ-ಇಚ್ಛಾ ಗಾಯವನ್ನುಂಟುಮಾಡಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ 332 ಸಹವಾಚಕ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ಮತ್ತು ಚಾಸಾ.4 ರವರಿಗೆ ಕೊಲೆ ಮಾಡದೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುವ ಕಾರಣ, ಆರೋಪಿತರಾದ ನೀವು, **ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

**ಸಿಸಿ. ನಂ.1534/2019**

ಆದ್ದರಿಂದ ನೀವುಗಳು ಮೇಲ್ಕಂಡ ದಂಡನೀಯ ಅಪರಾದಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ 05.04.2023

-ಸಹಿ-

**(ಹೆಚ್.ಪಿ ಮೋಹನ್‌ಕುಮಾರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕಡೂರು.**

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು</u>**
**<u>ಕಡೂರು</u>**

**<u>ಸಿಸಿ . ನಂ. 1534/2017</u>**

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 1 ನೇ ಆರೋಪಿಯ ಹೆಸರು | ಃ | ನಾಗೇಶ್ ಎಸ್ |
| ತಂದೆಯ ಹೆಸರು | ಃ | ಸತ್ಯನಾರಾಯಣ |
| ವಯಸ್ಸು | ಃ | 25 ವರ್ಷ, |
| ಉದ್ಯೋಗ | ಃ | ಚಾಲಕ |
| ವಾಸಃ | ಃ | ಗೆದ್ಲೆಹಳ್ಳಿ, ಭೋವಿ ಕಾಲೋನಿ, ಕಡೂರು ತಾಲ್ಲೂಕು. |

**<u>ದೋಷಾರೋಪಣೆ</u>**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ05.04.2023 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,

ಕಡೂರು.

1 ನೇ ಆರೋಪಿಯ ಸಹಿಃ

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು</u>**

**<u>ಕಡೂರು</u>**

**<u>ಸಿಸಿ . ನಂ. 1534/2017</u>**

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 2 ನೇ ಆರೋಪಿಯ ಹೆಸರು | ಃ | ದಯಾನಂದ ವೈ.ಟಿ. |
| ತಂದೆಯ ಹೆಸರು | ಃ | ತಮ್ಮಯ್ಯ |
| ವಯಸ್ಸು | ಃ | 37 ವರ್ಷ |
| ಉದ್ಯೋಗ | ಃ | ಚಿಲ್ಲರೆ ಅಂಗಡಿ ವ್ಯಾಪಾರ |
| ವಾಸಃ | ಃ | ಯಗಟಿ ಗ್ರಾಮ, ಕಡೂರು ತಾಲ್ಲೂಕು. |

**<u>ದೋಷಾರೋಪಣೆ</u>**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ05.04.2023 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಕಡೂರು.

2 ನೇ ಆರೋಪಿಯ ಸಹಿಃ

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು</u>**
**<u>ಕಡೂರು</u>**

**<u>ಸಿಸಿ . ನಂ. 1534/2017</u>**

| | | |
|---|---|---|
| ಫಿರ್ಯಾದಿ | ಃ | ಕಡೂರು ಪೋಲಿಸ್ |
| | ವಿರುದ್ದ | |
| 3 ನೇ ಆರೋಪಿಯ ಹೆಸರು | ಃ | ರಂಗಸ್ವಾಮಿ ವಿ |
| ತಂದೆಯ ಹೆಸರು | ಃ | ವೆಂಕಟಪ್ಪ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಕೂಲಿ |
| ವಾಸಃ | ಃ | ಗೆದ್ಲೆಹಳ್ಳಿ, ಭೋಳಿ ಕಾಲೋನಿ, ಕಡೂರು ತಾಲ್ಲೂಕು. |

**<u>ದೋಷಾರೋಪಣೆ</u>**

ಪ್ರಶ್ನೆ : 1. ಈಗ ಓದಿ ಹೇಳಿದ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೆ?
ಉತ್ತರ :

ಪ್ರಶ್ನೆ : 2. ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?
ಉತ್ತರ :

ದಿನಾಂಕಃ05.04.2023 ರಂದು ದೋಷಾರೋಪಣೆಯ ಸಾರಾಂಶವನ್ನು ಆರೋಪಿಗಳಿಗೆ ಅವರಿಗೆ ತಿಳಿದ ಭಾಷೆಯಲ್ಲಿ ಓದಿ, ವಿವರಿಸಿ, ಹೇಳಲಾಯಿತು ಮತ್ತು ದೋಷಾರೋಪಣೆಯಲ್ಲಿ ಬರೆದ ವಿಚಾರಗಳು ಅವರಿಗೆ ತಿಳಿದಿರುತ್ತದೆ ಮತ್ತು ಅರ್ಥವಾಗಿರುತ್ತದೆ ಎಂದು ತಿಳಿಸಿದ ಮೇರೆಗೆ ಸಹಿ ಪಡೆದುಕೊಳ್ಳಲಾಯಿತು.

(ಹೆಚ್.ಪಿ ಮೋಹನ್‌ಕುಮಾರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,

ಕಡೂರು.

3 ನೇ ಆರೋಪಿಯ ಸಹಿಃ